

ಬಾಳೆನಾರನ್ನು ಹದವಾಗಿ ಮಿಶ್ರ ಮಾಡಿ ಬಳಸುತ್ತಾರೆ. ನೇಪಾಳಿ ಮಹಿಳೆಯರು ಒಣಗಿದ ಬಾಳೆನಾರನ್ನು ಆರಿಸಿ ನೀರಿನಲ್ಲಿ ಅದ್ದಿ, ಸಂಸ್ಕರಿಸಿ ಉತ್ತಮ ಗುಣಮಟ್ಟದ ಬಣ್ಣ ಬಣ್ಣದ ಮೃದುವಾದ ನೂಲಿನ ಉಂಡೆಗಳನ್ನು ತಯಾರಿಸುತ್ತಾರೆ. ಬಾಳೆನಾರಿನ 'ಸೆಲ್ಯುಲೋಸ್' ಭಾಗವನ್ನು ಮಾತ್ರ ಪಡೆಯಲು ನಾರನ್ನು ನೀರಿನಲ್ಲಿರಿಸಿ ಕೊಳೆಯಿಸುತ್ತಾರೆ.

## ಜಪಾನ್‌ನಲ್ಲಿ ಬಾಳೆನಾರು

ಜಪಾನ್‌ನ ಚರಿತ್ರೆಯಲ್ಲಿ ಬಾಳೆನಾರಿನ ಬಟ್ಟೆಗಳಿಗೆ ವಿಶೇಷ ಮಹತ್ವವಿದೆ. ಅಲ್ಲಿ 13ನೇ ಶತಮಾನದಲ್ಲೇ ಬಾಳೆನಾರಿನ ಬಟ್ಟೆಗಳನ್ನು ತಯಾರಿಸುತ್ತಿದ್ದರು. ಈಗಲೂ ಅಲ್ಲಿ ಬಾಳೆನಾರಿನಿಂದ ಬಟ್ಟೆಗಳನ್ನು ತಯಾರಿಸುತ್ತಾರೆ. ಜಪಾನ್‌ನ ತಯಾರಿಕಾ ಕ್ರಮ ಸ್ವಲ್ಪ ಭಿನ್ನವಾಗಿದೆ. ಬಾಳೆಯ ಹೊರಭಾಗದ ನಾರು ಸ್ವಲ್ಪ ಗಟ್ಟಿಯಾಗಿರುವುದರಿಂದ ಅದನ್ನು ಕೇವಲ ಮೇಜುಹಾಸುಗಳನ್ನು ತಯಾರಿಸಲು ಮಾತ್ರ ಬಳಸುತ್ತಾರೆ. ಅದರಿಂದ ಒಳಗಿನ ನಾರನ್ನು ಟೈಗಳನ್ನು ತಯಾರಿಸಲು ಬಳಸುತ್ತಾರೆ. ಅದಕ್ಕೂ ಒಳಭಾಗದ 'ನಹಾಗೂ' ನಾರನ್ನು





ಕಿಮೋನೋ ಮುಂತಾದವನ್ನು ತಯಾರಿಸಲು ಬಳಸುತ್ತಾರೆ. ಹೀಗೆ ವಿಂಗಡಿಸಿದ ಬಾಳೆನಾರನ್ನು ಮುಚ್ಚಿದ ಪಾತ್ರೆಯಲ್ಲಿ ಹಾಕಿ ಕ್ಷಾರೀಯ ದ್ರಾವಣದಲ್ಲಿ ಕುದಿಸಿ ಸಂಸ್ಕರಿಸುತ್ತಾರೆ. ಆಮೇಲೆ ನೀರಿನಲ್ಲಿ ಚೆನ್ನಾಗಿ ತೊಳೆಯುತ್ತಾರೆ.

ದಪ್ಪದ ನಾರು ಹಾಗೂ ತೆಳು ನಾರನ್ನು ಬೇರ್ಪಡಿಸುವುದು ಮುಂದಿನ ಹಂತ. ಇದಕ್ಕಾಗಿ ಬಿದಿರಿನ ಉಪಕರಣಗಳನ್ನು ಬಳಸುತ್ತಾರೆ. ಈ ನಾರನ್ನು ನೆರಳಿನಲ್ಲಿ ಚೆನ್ನಾಗಿ ಒಣಗಿಸಿ ಸುತ್ತಿ ಇಡುತ್ತಾರೆ. ಬಾಳೆಯ ಸಿಪ್ಪೆಯಿಂದ ತೆಗೆದ ಈ ನಾರನ್ನು ಒಂದು ವಿಶಿಷ್ಟ ರೀತಿಯಲ್ಲಿ ನೂಲನ್ನಾಗಿ ಮಾಡುತ್ತಾರೆ. ಕಿಮೋನೋ ತಯಾರಿಸಲು ಬೇಕಾದ ಬಟ್ಟೆಯಾದರೆ ಬಹಳ ಸಪುರವಾದ ಹಾಗೂ ಮೆದು ನಾರನ್ನು ಬಳಸುತ್ತಾರೆ. ಈ ಕೆಲಸಕ್ಕೆ ಬಹಳ ತಾಳ್ಮೆ ಬೇಕಾಗುತ್ತದೆ. ಚರಕದಲ್ಲಿ ಈ ನೂಲನ್ನು ನೂಲಲಾಗುತ್ತದೆ. ಹೀಗೆ ನೇಯ್ಗೆ ಹಂತದವರೆಗೆ ಹಲವಾರು ಹಂತಗಳಿವೆ.

ಈಗ ನಮ್ಮದೇ ದೇಶಕ್ಕೆ ಬನ್ನಿ. ತಮಿಳುನಾಡಿನ ರಾಜಧಾನಿ ಚೆನ್ನೈ ಸಮೀಪದ 'ಅನಗಪುತ್ತೂರು' ಎಂಬ ಗ್ರಾಮಾಂತರ ಪ್ರದೇಶದ ಶೇಖರ್ ಎಂಬ ನೇಕಾರ ಬಾಳೆನಾರಿನ ಬಟ್ಟೆ ತಯಾರಿಸುತ್ತಾರೆ. ಶೇಖರ್‌ಗೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ ಬಾಳೆನಾರಿನಿಂದ ಬಟ್ಟೆ ತಯಾರಿಸುವ ಈ ಯೋಚನೆ ಬಂದಿತ್ತು. ಆದರೆ ಬಾಳೆನಾರಿನಂತಹ ದೊರಗು ಕಚ್ಚಾವಸ್ತುವಿನಿಂದ ಮೃದುವಾದ ನೂಲು ತೆಗೆಯುವುದು ಅಷ್ಟು ಸುಲಭವಾದ ಕೆಲಸವಾಗಿರಲಿಲ್ಲ. ಹಲವಾರು ಪ್ರಯೋಗಗಳ ನಂತರ ಬಾಳೆನಾರಿನಿಂದ ಸಪುರವಾದ, ನೇಯ್ಗೆಗೆ ಸರಿಯಾಗುವಂತಹ ನೂಲನ್ನು ತೆಗೆಯುವಲ್ಲಿ ಅವರು ಸಫಲರಾದರು.

'ಬಾಳೆನಾರು ಕೂಡ ಹತ್ತಿಯಂತೆಯೇ ಉತ್ತಮ ಗುಣಮಟ್ಟದ್ದು. ಧಾರಾಳವಾಗಿ ಲಭ್ಯ ಮಾತ್ರವಲ್ಲದೆ ಪರಿಸರಕ್ಕೂ ಹಿತ' ಎನ್ನುವ ಶೇಖರ್ ಮದುವೆಯಂತಹ ಕಾರ್ಯಕ್ರಮಗಳಲ್ಲಿ ಬಳಸಿ ಬಿಸಾಕುವ ಬಾಳೆಯ ಕಾಂಡಗಳನ್ನು ಉಪಯೋಗಿಸಿ ನೂಲು ತೆಗೆಯುತ್ತಾರೆ. ಇವರು ಅನಗಪುತ್ತೂರಿನ ಹತ್ತಿಯ ಬಟ್ಟೆ, ಸೆಣಬಿನ ಚೀಲಗಳನ್ನು ತಯಾರಿಸುವ ಸ್ವಸಹಾಯ ಸಂಘವೊಂದರ ಸದಸ್ಯರೂ ಹೌದು. ಫಿಲಿಪ್ಪೀನ್ಸ್ ದೇಶದಲ್ಲಿ ಬಾಳೆನಾರಿನಿಂದ ವಾಣಿಜ್ಯಕವಾಗಿ ನೂಲು ತಯಾರಿಸುವ ಘಟಕಗಳಿವೆ. ಅವುಗಳನ್ನು ಒಂದು ಸಲ ಸಂದರ್ಶಿಸಿ ಸರಿಯಾದ ಮಾಹಿತಿ ಪಡೆದು ಬರಬೇಕೆಂದುಕೊಂಡಿದ್ದಾರೆ. ಬಾಳೆನಾರಿನ ನೂಲಿನಿಂದ ತಯಾರಿಸಿದ ಈ ಬಟ್ಟೆಗಳು ಧರಿಸಲು ತುಂಬಾ ಹಿತಕರವೆಂದು ಅನಗಪುತ್ತೂರಿನ ನೇಕಾರ ಮಹಿಳೆಯರು ಹೇಳುತ್ತಾರೆ. ಬೇಸಗೆಯಲ್ಲಂತೂ ಶರೀರಕ್ಕೆ ಇದು ಬಹಳ ಉತ್ತಮ. ಈ ಬಟ್ಟೆಗಳಿಗೆ ಆ್ಯಂಟಿ ಬ್ಯಾಕ್ಟೀರಿಯಲ್ ಗುಣವಿದೆ ಎನ್ನುತ್ತಾರೆ ವಿಜ್ಞಾನಿಗಳು.

ಬೆಂಗಳೂರಿನ ಸಮೀಪವೂ ಬಾಳೆನಾರಿನ ಉತ್ಪನ್ನ ತಯಾರಿಸುವ ಘಟಕಗಳು ಪ್ರಾರಂಭವಾಗಿವೆ. ಕೇರಳದ ವಯನಾಡಿನ ಕೆಲವು 'ಕುಟುಂಬಶ್ರೀ' ಘಟಕಗಳು (ಸ್ತ್ರೀ ಸ್ವಸಹಾಯ ಸಂಘಗಳು) ಬಾಳೆನಾರಿನ ವಿವಿಧ ಕರಕುಶಲ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಗೆ ಇಳಿಸಿವೆ. ಬ್ಯಾಗ್‌ಗಳು, ಪೆನ್‌ಸ್ಟ್ಯಾಂಡ್, ಗೋಡೆ ಅಲಂಕಾರಗಳು... ಹೀಗೆ ಹತ್ತು ಹಲವು ಬಗೆಯ ಉತ್ಪನ್ನಗಳು ಇದೀಗ ಕೇರಳದ ವಿವಿಧ ಕಡೆಗಳಲ್ಲಿ ಖರೀದಿಗೆ ಸಿಗತೊಡಗಿವೆ.

ಮಾಹಿತಿಗೆ: **9946319992**